





ಸುದ್ದಿ ಸಂಚಯ

# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ದುರ್ಗಾಪೂಜೆ: ಬೇಲೂರು ಮಠದಲ್ಲಿ** ದುರ್ಗಾಪೂಜೆಯನ್ನು ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೨ರ ವರೆಗೆ ಶ್ರದ್ಧೆ, ಭಕ್ತಿ, ಉತ್ಸಾಹಗಳೊಂದಿಗೆ ನಡೆಸಲಾಯಿತು. ಈ ನಾಲ್ಕು ದಿನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ನೆರೆದಿದ್ದರು.

ಇತರ ಶಾಖಾಕೇಂದ್ರಗಳಲ್ಲಿ ಕೂಡ ದುರ್ಗಾಪೂಜೆ (೩೯ ಕೇಂದ್ರಗಳಲ್ಲಿ ಪ್ರತಿಮೆಯೊಂದಿಗೆ) ನೆರವೇರಿತು.

**ಶಾಖಾಕೇಂದ್ರಗಳ ಚಟುವಟಿಕೆಗಳು: ಭಾರತದಲ್ಲಿ :** ಅಕ್ಟೋಬರ್ ೨೪ರಂದು **ಜಮ್ಮು** ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾದ ಶ್ರೀರಾಮಕೃಷ್ಣ ದೇವಾಲಯವನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಪೂಜ್ಯ ಸ್ವಾಮಿ ವಿಮಲಾತ್ಮಾನಂದಜಿಯವರು ಉದ್ಘಾಟಿಸಿದರು. ಅಕ್ಟೋಬರ್ ೨೫ರಂದು RKMVERI ಕೇಂದ್ರದ ಆಫ್-ಕ್ಯಾಂಪಸ್ ಆಗಿರುವ **ಕೊಯಮತ್ತೂರು ಮಿಷನ್ ವಿದ್ಯಾಲಯದಲ್ಲಿ** ಘಟಿಕೋತ್ಸವವು ಜರಗಿತು. ೧೫೯ ಮಂದಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ಪುರುಲಿಯಾ** ಕೇಂದ್ರದಲ್ಲಿ ಹೊಸದಾಗಿ ಆರಂಭಿಸಲಾದ ನೂತನ ಕೃಷಿ ವಿಶ್ವವಿದ್ಯಾಲಯವನ್ನು ಅಕ್ಟೋಬರ್ ೨೫ರಂದು ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಉದ್ಘಾಟಿಸಿದರು. ಅವರು **ಬ್ರಜೇಪ್ರತಾಪಪುರದಲ್ಲಿ** ಅಕ್ಟೋಬರ್ ೨೬ರಂದು ಕಾನ್ಫರೆನ್ಸ್ ಹಾಲ್ ಅನ್ನು ಕೂಡ ಉದ್ಘಾಟಿಸಿದರು.

ಸೆಪ್ಟೆಂಬರ್ ೧೭ರಂದು ಸಂಘದ ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಸುಹಿತಾನಂದಜಿಯವರು **ಪೊನ್ನಂಪೇಟೆ** ಕೇಂದ್ರದಲ್ಲಿ ನಿಯೋಜಿತ ನೂತನ ಆಸ್ಪತ್ರೆಯ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿದರು. ಅವರು ಸೆಪ್ಟೆಂಬರ್ ೨೦ರಂದು **ಹಲಸೂರು** ಆಶ್ರಮದಲ್ಲಿ ನೂತನ ಸಾಧುನಿವಾಸಕ್ಕೆ ಶಿಲಾನ್ಯಾಸ ಮಾಡಿದರು.

**ಮೌಲ್ಯಶಿಕ್ಷಣ ಶಿಬಿರಗಳು ಮತ್ತು ಯುವ ಸಮ್ಮೇಳನಗಳು:** ಈ ಕೆಳಗಿನ ಕೇಂದ್ರಗಳು **ಮೌಲ್ಯ ಶಿಕ್ಷಣ ಶಿಬಿರಗಳನ್ನು** ನಡೆಸಿವೆ: ಕೊಯಮತ್ತೂರು ಮಿಷನ್, ಕೋಣಂಪಟ್ಟಿ, ರಾಜಮಹೇಂದ್ರವರಂ, ತಂಜಾವೂರು.

ಈ ಕೆಳಗಿನ ಕೇಂದ್ರಗಳು **ಯುವ ಸಮ್ಮೇಳನ** ಹಾಗೂ **ಶಿಬಿರಗಳನ್ನು** ನಡೆಸಿವೆ: ಬಸವನಗುಡಿ (ಬೆಂಗಳೂರು), ಬೆಳಗಾವಿ, ದಕ್ಷಿಣೇಶ್ವರ, ಹಲಸೂರು (ಬೆಂಗಳೂರು), ಜಮ್ಮು, ಖೇತ್ರಿ, ಪೊನ್ನಂಪೇಟೆ, ಪ್ರಯಾಗ್‌ರಾಜ್, ರಾಯಪುರ, ಸೇಲಂ.

**ಉಚಿತ ವೈದ್ಯಕೀಯ ಶಿಬಿರ ಮತ್ತು ನೇತ್ರಚಿಕಿತ್ಸಾ ಶಿಬಿರಗಳು:** ಈ ಕೆಳಗಿನ ಕೇಂದ್ರಗಳು ಉಚಿತ ವೈದ್ಯಕೀಯ ಶಿಬಿರ ಮತ್ತು ನೇತ್ರಚಿಕಿತ್ಸಾ ಶಿಬಿರಗಳನ್ನು ನಡೆಸಿವೆ: ಬಾಂಕುರ, ಬೆಳಗಾವಿ, ಚೆನ್ನೈ ಮಠ, ಕೊಯಮತ್ತೂರು ಮಿಷನ್, ದಕ್ಷಿಣೇಶ್ವರ, ಧಾಲೇಶ್ವರ, ಜಮ್ಮು, ಜೆಮ್‌ಶೆಡ್‌ಪುರ, ಕಾನ್ಪುರ, ಲಕ್ನೋ, ಖೇತ್ರಿ, ಮದುರೈ, ನಾಗಪುರ, ನೌರಾ, ನಟ್ಟರಾಂಪಳ್ಳಿ, ಪತ್ತನಂತಿಟ್ಟ, ಪೋರ್‌ಬಂದರ್, ಪ್ರಯಾಗ್‌ರಾಜ್, ರಾಜಮಹೇಂದ್ರವರಂ, ರಾಮಹರಿಪುರ, ಋಷೀಕೇಶ, ಸೇಲಂ, ತಂಜಾವೂರು, ತಿರುಮಕ್ಕೂಡಲ್, ವಿವೇಕನಗರ.







Managing Editor : Swami Muktidananda
Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020